ಶ್ರೀ ಹೆಚ್.ಕೆ.ಕುಮಾರಸ್ವಾಮಿ :– ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಸದನದಲ್ಲಿ ಇಲ್ಲ.

ಅಧ್ಯಕ್ಷರು :– ಈಗ ನೀವು ಕೇಳುತ್ತೀರೋ? ಇಲ್ಲವೋ?

9) **ವಿಷಯ : ಸಕಲೇಶಪುರ ಬಾಚಿಹಳ್ಳಿ ಗ್ರಾಮದ ಹಾಲಪ್ಪನವರ ಕೊಲೆ ಮಾಡಿರುವ ಪ್ರಭಾವಿ ಆರೋಪಿಗಳನ್ನು ಬಂಧಿಸುವ ಬಗ್ಗೆ.**

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :– ಮಾನ್ಯ ಅಧ್ಯಕ್ಷರೆ, ಮೊನ್ನೆ ಇತ್ತೀಚೆಗೆ ದಿನಾಂಕ 4.6.2013ರಂದು ನನ್ನ ಕ್ಷೇತ್ರದ ಬಿಸಲೆ ಗ್ರಾಮದಲ್ಲಿ ಗಡಿ ಚೌಡೇಶ್ವರಿ ಎಂಬ ದೇವಸ್ಥಾನವೊಂದಿದೆ. ಅದು ಅರಣ್ಯ ವಲಯದಲ್ಲಿ ಬರುತ್ತದೆ.

ಅಧ್ಯಕ್ಷರು :– ಆಯಿತು, ಅಲ್ಲಿ ಕೊಲೆಯಾಗಿದೆ. ನಿಮಗೆ ಏನು ಆಗಬೇಕಾಗಿದೆ ಎಂದು ಕೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ :– ಅಲ್ಲಿ ಹೋಗಿ ಪೂಜೆ ಮಾಡತಕ್ಕ ವಿಷಯದಲ್ಲಿ ಎರಡು ಗುಂಪುಗಳ ನಡುವೆ ಗಲಾಟೆಯಾಗಿದೆ. ಆ ಗಲಾಟೆಯಲ್ಲಿ ನನ್ನ ಸಕಲೇಶಪುರ ತಾಲ್ಲೂಕಿನ ಬಾಚಿಹಳ್ಳಿ ಗ್ರಾಮದ ಹಾಲಪ್ಪ ಎಂಬುವವರ ಕೊಲೆಯಾಗಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ forest departmentನ watcher ಒಬ್ಬನನ್ನು ಬಂಧಿಸಿದ್ದಾರೆ. ಆದರೆ ಅಲ್ಲಿ ಆಗಿರತಕ್ಕಂಥ ಸನ್ನಿವೇಶವೇ ಬೇರೆಯಾಗಿದೆ. ಪಕ್ಕದ ಸುಬ್ರಮಣ್ಯದವರೂ ಕೂಡ ಅಲ್ಲಿಗೆ ಬಂದಿದ್ದರು. ಅವರವರ ಮಧ್ಯೆ ಹೊಡೆದಾಟವಾಗಿ ಅವನು ಸತ್ತಿದ್ದಾನೆ. ಅಲ್ಲಿ ನಿಜವಾದ ಅಪರಾಧಿಗಳನ್ನು/ಆರೋಪಿಗಳನ್ನು ಬಂಧಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಆದ್ದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ನಿಜವಾದ ಆರೋಪಿಗಳು ಯಾರಿದ್ದಾರೋ, ಅವರನ್ನು ಬಂಧಿಸಬೇಕು. ಅಲ್ಲಿ ಅವರು ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಅವರ ಪ್ರಭಾವಕ್ಕೆ ಸರ್ಕಾರ ಮಣಿಯಬಾರದು ಎನ್ನುವುದು ನನ್ನ ಒತ್ತಾಯವಾಗಿದೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು] :– ಮಾನ್ಯ ಅಧ್ಯಕ್ಷರೆ, ಅವರ ಊರಿನಿಂದ ನನ್ನ ಹತ್ತಿರವೂ ಕೂಡ ಬಂದು ಮನವಿಯನ್ನು ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೂ ಬಂದಿದೆ. ಆದರೆ

ವಾಸ್ತವಿಕವಾಗಿ ಏನಿದೆ ಎಂಬ ಬಗ್ಗೆ ನಾನೂ ಕೂಡ ಮಾತನಾಡಿದ್ದೇನೆ. ಅವರು ಹೇಳಿರತಕ್ಕದ್ದಕ್ಕೆ ಸರ್ಕಾರ ಸ್ಪಂದಿಸಿದೆ. ಆದರೆ ಪ್ರತ್ಯೇಕವಾಗಿ, ಇವತ್ತಿನ ಮಟ್ಟಿಗೆ ಈ ಗಂಟೆಗೆ ಏನಾಗಿದೆ ಎನ್ನತಕ್ಕ ಉತ್ತರವನ್ನು Home Ministerರವರಿಂದ ಕೊಡಿಸುತ್ತೇನೆ.

10) ವಿಷಯ : ಸಿಡಿಲು ಬಡಿದು ಮತ್ತು ಮನೆ ಕುಸಿತದಿಂದಾಗಿ ಮರಣ ಹೊಂದಿರುವವರಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಪರಿಹಾರವನ್ನು ಘೋಷಿಸುವ ಬಗ್ಗೆ.

ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) :– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಕೋನುವಾರ ಗ್ರಾಮದಲ್ಲಿ ಸಿಡಿಲು ಬಡಿದು ಮೂರು ಜನ ಮರಣ ಹೊಂದಿದ್ದರು. ಅವರಲ್ಲಿ ಇಬ್ಬರಿಗೆ ಮಾತ್ರ ಪ್ರಾಕೃತಿಕ ವಿಕೋಪ ನಿಧಿಯಿಂದ 1 ಲಕ್ಷ ರೂ.ಗಳ ಪರಿಹಾರವನ್ನು ಕೊಡಲಾಗಿದೆ.– ಇನ್ನೊಬ್ಬರು minor ಆಗಿರುವುದರಿಂದ, ಅವರಿಗೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲ ಎಂದು ಅವರಿಗೆ ಪರಿಹಾರವನ್ನು ಕೊಟ್ಟಿಲ್ಲ. 14 ವರ್ಷದ ಒಬ್ಬ ಹುಡುಗ ಅಲ್ಲಿ ತೀರಿಕೊಂಡಿದ್ದಾನೆ. ಅವನಿಗೂ ಸಹ ಪರಿಹಾರವನ್ನು ಒದಗಿಸಬೇಕು. ಇದಲ್ಲದೆ 8ನೇ ತಾರೀಖಿನಂದು ಮನೆ ಕುಸಿದು ಬಿದ್ದು ನಾಲ್ಕು ವರ್ಷದ ಮಗು ತೀರಿಕೊಂಡಿದೆ. ಅವರ ತಂದೆ ನಡು ಮುರಿದು ಬಹಳಷ್ಟು ಗಂಭೀರ ಸ್ಥಿತಿಯಲ್ಲಿದ್ದಾರೆ. ಅವರಿಗೂ ಕೂಡ ಈ ಪ್ರಾಕೃತಿಕ ವಿಕೋಪ ನಿಧಿಯಿಂದ ಪರಿಹಾರವನ್ನು ಘೋಷಿಸಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ [ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು] :– ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಾಪ ಗೌಡ ಪಾಟೀಲ್‌ರವರು ಪ್ರಸ್ತಾಪಿಸಿರತಕ್ಕ ವಿಚಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ನನ್ನ ಹತ್ತಿರ ಚರ್ಚೆ ಮಾಡಿದ್ದಾರೆ. ಅವರ ಪ್ರಸ್ತಾಪಕ್ಕೆ ಉತ್ತರವೂ ಕೂಡ ಇದೆ. ಅವರು ಎಲ್ಲೋ ಹೊರಗಡೆ ಹೋಗಿದ್ದಾರೆಂದು ಕಾಣುತ್ತದೆ. ಸರ್ಕಾರ ಮಾನ್ಯ ಸದಸ್ಯರ ಬೇಡಿಕೆಗೆ ಸ್ಪಂದಿಸಿದೆ. ಮಾನ್ಯ ಸದಸ್ಯರಿಗೆ ಸರ್ಕಾರದ ಉತ್ತರವನ್ನು ಕಳುಹಿಸಿಕೊಡುತ್ತೇನೆ.